# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಧಾರವಾಡ

## ಎಸ್.ಸಿ. ಸಂಖ್ಯೆ: 173/2019

ಅ.ಸಾ. 03

ದೊ.ಸಾ. 01

| | |
|---|---|
| ಸಾಕ್ಷಿಯ ಹೆಸರು | ಃ ರಾಕೇಶ ಹರಪನಹಳ್ಳಿ |
| ತಂದೆ ಹೆಸರು | ಃ ಅರುಣ |
| ವಯಸ್ಸು | ಃ 27 ವರ್ಷ |
| ಉದ್ಯೋಗ | ಃ ಅಟೋ ಚಾಲಕ |
| ವಾಸಸ್ಥಳ | ಃ ಕೆಲಗೇರಿ, ಧಾರವಾಡ |
| ಸತ್ಯ ಪ್ರತಿಜ್ಞೆ ಮೇರೆಗೆ, ದಿನಾಂಕ | ಃ 24/05/2022 |

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದಃ**

ಮೃತ ನಾಗರಾಜ ನನ್ನ ತಮ್ಮ. ಚಾಸಾ.15 ಶ್ರೀಮತಿ ಸುನಿತಾ ಮೃತ ನಾಗರಾಜನ ಹೆಂಡತಿಯಾಗಬೇಕು. ಚಾಸಾ.12 ನನ್ನ ತಮ್ಮ. ಚಾಸಾ.13 ನನ್ನ ತಂದೆ. ಚಾಸಾ.14 ಶ್ರೀಮತಿ ಕಲಾವತಿ ನನ್ನ ತಾಯಿ. ಚಾಸಾ.17 ಸಂತೋಷ, ಚಾಸಾ.18 ರಮೇಶ ಮತ್ತು ಚಾಸಾ.19 ಶಿವಾನಂದ ಇವರ ಪರಿಚಯವಿದೆ. ಅದೇ ರೀತಿ ಮೂರು ಜನ ಆರೋಪಿಗಳ ಪರಿಚಯವಿದೆ.

2. ದಿಃ26/07/2019 ರಂದು ಬೆಳಿಗ್ಗೆ ನಾನು ಅಟೋ ಚಾಲನೆ ಮಾಡುವ ಕೆಲಸಕ್ಕೆ ಹೋಗಿದ್ದೆ. ರಾತ್ರಿ ಸುಮಾರು 8.30 ರಿಂದ 9.00 ಗಂಟೆಗೆ ಕೆಲಸ ಮುಗಿಸಿ ನಾನು ನಮ್ಮ ಮನೆಗೆ ಬಂದೆ. ಆಗ ಚಾಸಾ.15 ಶ್ರೀಮತಿ ಸುನಿತಾ ಈಕೆಯಿಂದ ಚಾಸಾ.12 ಮಂಜುನಾಥ ಈತನ ಮೊಬೈಲ್ ಫೋನಿಗೆ ಕರೆ ಬಂದಿತ್ತು. ಸದರಿ ಸಂದರ್ಭದಲ್ಲಿ ಚಾಸಾ.15 ಶ್ರೀಮತಿ ಸುನಿತಾ ತನ್ನ ತವರು ಮನೆ ಇರುವ ಧಾರವಾಡದ ಸಾಧನಕೇರಿಗೆ ಹೋಗಿದ್ದಳು. ನನ್ನ ಅಣ್ಣ ನಾಗರಾಜ ನಮ್ಮೊಂದಿಗೆ ವಾಸವಾಗಿದ್ದು, ಆ ಸಮಯದಲ್ಲಿ ತನ್ನ ಹೆಂಡತಿ ಮನೆಗೂ ಹೋಗುತ್ತಿದ್ದ. ಚಾಸಾ.15 ಸುನಿತಾ, ಚಾಸಾ.12 ಮಂಜುನಾಥನಿಗೆ ಫೋನ್ ಮಾಡಿ ತನ್ನ ಗಂಡ ನಿಮ್ಮ ಮನೆಗೆ ಬಂದಿದ್ದಾನಾ ಎಂದು ಕೇಳಿದಳು. ಆಗ ಚಾಸಾ.12, ಚಾಸಾ.15 ಕ್ಕೆ ಮಧ್ಯಾಹ್ನ 2.30 ಗಂಟೆಗೆ ಚಾಸಾ.17 ಸಂತೋಷ ದೋಟಿಕಲ್ ಇವನಿಂದ ತಾನು ಹಣ ಇಸಿದುಕೊಂಡು ಬರುತ್ತೇನೆ ಎಂದು ಹೇಳಿ ಹೋಗಿದ್ದನೆಂದು ಗೊತ್ತಾಯಿತು. ನನ್ನ ತಮ್ಮ ನಾಗರಾಜ ಆ ದಿನ ರಾತ್ರಿಯೂ ಮರಳಿ ಮನೆಗೆ ಬರಲಿಲ್ಲ. ನಾವು ಸಂಬಂಧಿಗಳಿಗೆ ಫೋನ್ ಮಾಡಿ ನಾಗರಾಜನ ಬಗ್ಗೆ ವಿಚಾರಿಸಿದೆವು. ಆತ ಸಿಗಲಿಲ್ಲ. ಆತನನ್ನು ರಾತ್ರಿ ಮತ್ತು ಮರುದಿನ ಬೆಳಿಗ್ಗೆ ಹುಡುಕಾಡಿದೆವು. ಆತ ಸಿಕ್ಕಲಿಲ್ಲ. ಮರುದಿನ ಸಂಜೆ 6.00 ರಿಂದ 6.30 ಗಂಟೆ ಸಮಯದಲ್ಲಿ ಧಾರವಾಡದ ಸಬ್ ಅರ್ಬನ್ ಪೋಲಿಸ್ ಠಾಣೆಗೆ ನಾಗರಾಜ ಕಾಣೆಯಾದ ಬಗ್ಗೆ ದೂರು ಕೊಟ್ಟೆವು. ನಾನು ಕೊಟ್ಟ ದೂರನ್ನು ನೋಡಿದಲ್ಲಿ ಗುರ್ತಿಸುತ್ತೇನೆ. ಸದರಿ ದೂರಿನ ನಿಜ ಪ್ರತಿಯನ್ನು ಹಾಜರಪಡಿಸಿದ್ದು, ಅದಕ್ಕೆ ಆರೋಪಿ ಪರ

ವಕೀಲರ ಆಕ್ಷೇಪಕ್ಕೆ ಒಳಪಟ್ಟು ನಿಶಾನೆ ನೀಡಲಾಗಿದೆ. ಅದಕ್ಕೆ ನಿಪಿ.16 ಎಂದು ಗುರ್ತಿಸಲಾಯಿತು. ಅದರಲ್ಲಿರುವ ಸಾಕ್ಷಿಯ ಸಹಿಗೆ ನಿಶಾನೆ.ಪಿ.16(ಎ) ಎಂದು ಗುರ್ತಿಸಲಾಯಿತು.

3. ದೂರು ಕೊಟ್ಟ ನಂತರವೂ ಪೊಲೀಸರು ಹಾಗೂ ನಾವು ನಾಗರಾಜನನ್ನು ಹುಡುಕಾಡಿದೆವು. ನಾವು ನಾಗರಾಜನನ್ನು ಹುಡುಕಾಡುವ ಸಮಯದಲ್ಲಿ 1 ನೇ ಆರೋಪಿ ನಮ್ಮೊಂದಿಗೆ ನಾಗರಾಜನನ್ನು ಹುಡುಕಲು ಪ್ರಯತ್ನಿಸಿದ. ಧಾರವಾಡದ ಶ್ರೀನಗರ ಸರ್ಕಲ್ ನಲ್ಲಿರುವ ಸಿ.ಸಿ.ಟಿವಿ.,ಯ ಫೂಟೇಜ್‌ನ್ನು ನೋಡುವಾಗ 1 ನೇ ಆರೋಪಿ ಅಲ್ಲಿಂದ ಓಡಿ ಹೋದ. ಆಗ ನಮಗೂ ಸಹ ಭಯವಾಗಿ ಎಲ್ಲಿ ಏನೋ ಆಗಿರಬಹುದೆಂದು ಭಾವಿಸಿದೆವು. ಆ ದಿನ ನಾವು ಸಿಸಿ.ಟಿವಿಯ ಪೂಟೇಜ್ ನ್ನು ನೋಡಲಿಲ್ಲ.

4. ಮೇಲೆ ಹೇಳಿದಂತೆ ಸಿ.ಸಿ.ಟಿ.ವಿ., ಫೂಟೇಜ್‌ನ್ನು ನೋಡಲು ಪ್ರಯತ್ನಿಸಿದ 2 ದಿನಗಳ ನಂತರ ನಾವು ಪುನಃ ನಾಗರಾಜನನ್ನು ಹುಡುಕಲು ಯತ್ನಿಸುವಾಗ ಆತನಿಗೆ ಸೇರಿದ ಮೋಟಾರ್ ಸೈಕಲ್ ಟಿವಿಎಸ್ ಎನ್ಟಾರ್ಕ್ ಕರ್ನಾಟಕ ಯುನಿವರ್ಸಿಟಿಯ ಅಕ್ಕಮಹಾದೇವಿ ಹಾಸ್ಟೇಲ್ ಹತ್ತಿರ ನಿಂತಿತ್ತು. ಆ ಸಮಯದಲ್ಲಿ ನನ್ನೊಂದಿಗೆ ನನ್ನ ತಮ್ಮ ಮಂಜುನಾಥ ಮತ್ತು ಸಂತೋಷ ದೋಟಿಕಲ್ ಇದ್ದರು. ಸದರಿ ಮೋಟಾರ್ ಸೈಕಲ್‌ಗೆ ನೊಂದಣಿ ಸಂಖ್ಯೆ ಇರಲಿಲ್ಲ. ಪೊಲೀಸರಿಗೆ ಈ ಬಗ್ಗೆ ನಾನು ಮಾಹಿತಿ ಕೊಟ್ಟೆ. ಪೊಲೀಸರು ಆ ಸ್ಥಳಕ್ಕೆ ಬಂದರು. ಪೊಲೀಸರು ಸಹ ಆ ಸ್ಥಳದಲ್ಲೆಲ್ಲ ಹುಡುಕಾಡಿದರು. ಯುನಿವರ್ಸಿಟಿಯ ನೀಲಗಿರಿ ತೋಪಿನ ಬಳಿ ನನ್ನ ತಮ್ಮ ನಾಗರಾಜನ ಶವ ಸಿಕ್ಕಿತು. ಆತನ ಶವದ ಬಳಿ ಒಂದು ಬಡಿಗೆ ಬಿದ್ದಿತ್ತು. ನನ್ನ ತಮ್ಮನ ಶವ ಕೊಳೆತು ಹುಳುಗಳಾಗಿದ್ದವು. ಆತನ ಜೇಬಿನಲ್ಲಿ ಎಟಿಎಂ ಕಾರ್ಡ್, ಪಾನ್ ಕಾರ್ಡ್, ಆರ್.ಸಿ., ಕಾರ್ಡ್ ಮತ್ತು ಆರು ಪೋಟೋಗಳು ಇದ್ದವು. ಆತನ ಬಳಿ ರೆಡ್ಮಿ ಕಂಪನಿ ತಯಾರಿಕೆಯ ಮೊಬೈಲ್ ಫೋನ್ ಇತ್ತು. ಮೇಲೆ ಹೇಳಿದ ಕಾರ್ಡ್ ಗಳು ನನ್ನ ತಮ್ಮ ನಾಗರಾಜನ ಪರ್ಸ್ ನಲ್ಲಿ ಇದ್ದವು.

5. ಪೊಲೀಸರು ನಾಗರಾಜನ ಶವನನ್ನು ಧಾರವಾಡ ಜಿಲ್ಲಾ ಆಸ್ಪತ್ರೆಯ ಶವಾಗಾರಕ್ಕೆ ತೆಗೆದುಕೊಂಡು ಹೋದರು. ನಾನು ಸ್ಥಳದಿಂದ ಧಾರವಾಡದ ಸಬ್ ಅರ್ಬನ್ ಪೋಲಿಸ್ ಠಾಣೆಗೆ ಹೋದೆ. ಪೋಲಿಸ್ ಠಾಣೆಯಲ್ಲಿ ದೂರನ್ನು ಬರೆದುಕೊಟ್ಟೆ. ಮಲ್ಲಿಕಾರ್ಜುನ ಹಡಪದ, ಮತೀನ್ ಪೀರಜಾದೆ ಮತ್ತು ನವೀನ ಉಗರಗೋಳ ಇವರ ವಿರುದ್ಧ ದೂರು ಕೊಟ್ಟೆ. ಮಲ್ಲಿಕಾರ್ಜುನ ಹಡಪದ ನನ್ನ ತಮ್ಮ ನಾಗರಾಜನಿಂದ ತನ್ನ ತಂಗಿಯ ಮದುವೆಗಾಗಿ ರೂಪಾಯಿ ಒಂದು ಲಕ್ಷ ಸಾಲ ಪಡೆದಿದ್ದನಂತೆ. ಈ ಬಗ್ಗೆ ನಾಗರಾಜನಿಗೆ ಮತ್ತು ಮಲ್ಲಿಕಾರ್ಜುನನಿಗೂ ಜಗಳವಿತ್ತು. ಮಲ್ಲಿಕಾರ್ಜುನ ಹಡಪದ ಸದರಿ ಹಣದ ಬಾಬ್ತು ಯಾವ ಮೊತ್ತವನ್ನು ನಾಗರಾಜನಿಗೆ ಮರಳಿ ಪಾವತಿ ಮಾಡಿರಲಿಲ್ಲ. ಸದರಿ ಹಣವನ್ನು ಮರುಪಾವತಿ ಮಾಡುವಂತೆ ನಾಗರಾಜ ಮಲ್ಲಿಕಾರ್ಜುನ ಹಡಪದನನ್ನು ಕೇಳುತ್ತಿದ್ದ. ಆತನ ಮನೆಗೂ ಸಹ ಹಣ ಕೇಳಲು ಹೋಗಿದ್ದ. ಮಲ್ಲಿಕಾರ್ಜುನ

ಹಡಪದನ ತಾಯಿ ಮತ್ತು ತಂಗಿಗೆ ತಾನು ಕೊಟ್ಟ ಹಣ ಮರುಪಾವತಿ ಮಾಡುವಂತೆ ನಾಗರಾಜ ಕೇಳಿ ಬಂದಿದ್ದ. ಪೊಲೀಸರಿಗೆ ನಾನು ಕೊಟ್ಟ ದೂರನ್ನು ನೋಡಿದಲ್ಲಿ ಗುರ್ತಿಸುತ್ತೇನೆ. ಅದನ್ನು ಈಗ ನೋಡುತ್ತಿದ್ದು, ಅದಕ್ಕೆ ಈ ಮೊದಲು ನಿಪಿ.14 ಎಂದು ಗುರ್ತಿಸಲಾಗಿದೆ. ಅದರಲ್ಲಿರುವ ಸಾಕ್ಷಿಯ ಸಹಿಗೆ ನಿಶಾನೆ.ಪಿ.14(ಬಿ) ಎಂದು ಗುರ್ತಿಸಲಾಯಿತು. ಅದನ್ನು ಮಂಜುನಾಥ ಸುರಪುರ ಎನ್ನುವವನಿಗೆ ಹೇಳಿ ಬರೆಯಿಸಿದ್ದೇನೆ.

6. ನಾಗರಾಜನಿಗೆ ಸೇರಿದ ಎಟಿಎಂ ಕಾರ್ಡ್, ಪಾನ್ ಕಾರ್ಡ್, ಆರ್.ಸಿ., ಕಾರ್ಡ್, ಆರು ಪೋಟೋಗಳು, ಮೊಬೈಲ್ ಫೋನ್ ಹಾಗೂ ಪರ್ಸನ್ನು ಈಗ ತೋರಿಸಿದಲ್ಲಿ ಗುರ್ತಿಸುತ್ತೇನೆ. ಸಾಕ್ಷಿ ಸದರಿ ವಸ್ತುಗಳನ್ನು ನೋಡುತ್ತಿದ್ದು, ಮತದಾರರ ಚೀಟಿಗೆ ಈ ಮೊದಲು ನಿಶಾನೆ.ಪಿ.2 ಎಂದು ಗುರ್ತಿಸಲಾಗಿದೆ. ಐಡಿಬಿಐ., ಬ್ಯಾಂಕಿನ ಡೆಬಿಟ್ ಕಾರ್ಡಿಗೆ ಈ ಮೊದಲು ನಿಶಾನೆ.ಪಿ.3 ಎಂದು ಗುರ್ತಿಸಲಾಗಿದೆ. ಪಾನ್ ಕಾರ್ಡಿಗೆ ಈ ಮೊದಲು ನಿಶಾನೆ.ಪಿ.4 ಎಂದು ಗುರ್ತಿಸಲಾಗಿದೆ. ಆರ್.ಸಿ., ಕಾರ್ಡಿಗೆ ಈ ಮೊದಲು ನಿಶಾನೆ.ಪಿ.5 ಎಂದು ಗುರ್ತಿಸಲಾಗಿದೆ. ಆರು ಪಾಸ್‌ಪೋರ್ಟ್ ಸೈಜಿನ ಪೋಟೋಗಳನ್ನು ನೋಡುತ್ತಿದ್ದು, ಅವುಗಳಿಗೆ ಈ ಮೊದಲು ನಿಶಾನೆ.ಪಿ.6 ಎಂದು ಗುರ್ತಿಸಲಾಗಿದೆ.

7. ದಿಃ 30/07/2019 ರಂದು ಪೊಲೀಸರು ಪುನಃ ನನ್ನನ್ನು ಶವ ಬಿದ್ದ ಸ್ಥಳಕ್ಕೆ ಮಹಜರ್ ಮಾಡಲು ಕರೆದುಕೊಂಡು ಹೋದರು. ಪೊಲೀಸರಿಗೆ ಜಾಗವನ್ನು ನಾನೇ ತೋರಿಸಿದ್ದೇನೆ. ಪೊಲೀಸರು ನನ್ನ ಮತ್ತು ಚಾಸಾ.4 ಮಂಜುನಾಥ ಮುಗದ ಮತ್ತು ಪ್ರಾಸಾ.2 ಮಂಜುನಾಥ ಸುರಪುರ ಇವರ ಸಮಕ್ಷಮ ಸ್ಥಳ ಮಹಜರನ್ನು ಬರೆದಿದ್ದಾರೆ. ಮಹಜರನ್ನು ಬೆಳಿಗ್ಗೆ ಮಾಡಿದ್ದು, ಸುಮಾರು ಒಂದರಿಂದ ಒಂದೂವರೆ ಗಂಟೆ ಸಮಯ ಬೇಕಾಯಿತು. ಪಂಚನಾಮೆಗೆ ಪೊಲೀಸರು ನನ್ನ ಸಹಿ ಪಡೆದುಕೊಂಡಿದ್ದಾರೆ. ಸದರಿ ಪಂಚನಾಮೆಯಲ್ಲಿರುವ ನನ್ನ ಸಹಿಯನ್ನು ತೋರಿಸಿದಲ್ಲಿ ಗುರ್ತಿಸುತ್ತೇನೆ. ಪಂಚನಾಮೆಯನ್ನು ನೋಡುತ್ತಿದ್ದು, ಅದಕ್ಕೆ ಈ ಮೊದಲು ನಿಪಿ.8 ಎಂದು ಗುರ್ತಿಸಲಾಗಿದೆ. ಅದರಲ್ಲಿರುವ ಸಾಕ್ಷಿಯ ಸಹಿಗೆ ನಿಶಾನೆ.ಪಿ.8(ಸಿ) ಎಂದು ಗುರ್ತಿಸಲಾಯಿತು. ಸ್ಥಳದಲ್ಲಿದ್ದ ಟಿವಿಎಸ್ ಮೋಟಾರ್ ಸೈಕಲ್ ಮತ್ತು ಒಂದು ಬಡಿಗೆಯನ್ನು ಪೊಲೀಸರು ಅಮಾನತ್ತುಪಡಿಸಿಕೊಂಡರು. ಸದರಿ ವಾಹನವನ್ನು ನೋಡಿದಲ್ಲಿ ಗುರ್ತಿಸುತ್ತೇನೆ. (ವಾಹನವನ್ನು ಮೃತನ ಹೆಂಡತಿ ಮಧ್ಯಂತರ ಸ್ವಾಧೀನಕ್ಕೆ ಪಡೆದುಕೊಂಡಿದ್ದು, ಈ ದಿನ ಹಾಜರಪಡಿಸಿರುವುದಿಲ್ಲ). ಸದರಿ ವಾಹನದ ಪೋಟೋಗಳನ್ನು ನೋಡಿದಲ್ಲಿ ಗುರ್ತಿಸುತ್ತೇನೆ. ಸದರಿ ಪೋಟೋಗಳನ್ನು ನೋಡುತ್ತಿದ್ದು, ಅವುಗಳಿಗೆ ಈ ಮೊದಲು ನಿಪಿ.10 ರಿಂದ 15 ಎಂದು ಗುರ್ತಿಸಲಾಗಿದೆ. ಸ್ಥಳದಲ್ಲಿ ಅಮಾನತ್ತುಪಡಿಸಿದ ಬಡಿಗೆಯನ್ನು ತೋರಿಸಿದಲ್ಲಿ ಗುರ್ತಿಸುತ್ತೇನೆ. ಸದರಿ ಬಡಿಗೆಯನ್ನು ನೋಡುತ್ತಿದ್ದು, ಅದಕ್ಕೆ ಈ ಮೊದಲು ಮುಮಾ.3 ಎಂದು ಗುರ್ತಿಸಲಾಗಿದೆ.

8. ಪೊಲೀಸರು ಪಂಚನಾಮೆಯ ಸಮಯದಲ್ಲಿ ಪೋಟೋವನ್ನು ತೆಗೆದಿದ್ದಾರೆ. ಅದನ್ನು ನೋಡಿದಲ್ಲಿ ಗುರ್ತಿಸುತ್ತೇನೆ. ಸದರಿ ಪೋಟೋವನ್ನು ನೋಡುತ್ತಿದ್ದು, ಅದಕ್ಕೆ ಈ ಮೊದಲು

ನಿಪಿ.9 ಎಂದು ಗುರ್ತಿಸಲಾಗಿದೆ. ಆ ಸ್ಥಳದಲ್ಲಿ ನಕ್ಷೆಯನ್ನು ತೆಗೆಯಲಾಯಿತು. ಅದಕ್ಕೂ ಸಹ ನನ್ನ ಸಹಿಯನ್ನು ಪಡೆದುಕೊಳ್ಳಲಾಯಿತು. ನಕ್ಷೆಯನ್ನು ಮತ್ತು ನನ್ನ ಸಹಿಯನ್ನು ನೋಡಿದಲ್ಲಿ ಗುರ್ತಿಸುತ್ತೇನೆ. ಅದನ್ನು ಈಗ ನೋಡುತ್ತಿದ್ದು, ಅದಕ್ಕೆ ಈ ಮೊದಲು ನಿಪಿ.15 ಎಂದು ಗುರ್ತಿಸಲಾಗಿದೆ. ಅದರಲ್ಲಿರುವ ಸಾಕ್ಷಿಯ ಸಹಿಗೆ ನಿಶಾನೆ.ಪಿ.15(ಸಿ ) ಎಂದು ಗುರ್ತಿಸಲಾಯಿತು.

9. ಮಲ್ಲಿಕಾರ್ಜುನ ತನ್ನ ತಂಗಿಯ ಮದುವೆಗಾಗಿ ನಾಗರಾಜನಿಂದ ಸಾಲ ಪಡೆಯುವಾಗ ಬಾಂಡ್ ಬರೆದುಕೊಟ್ಟಿದ್ದ. ಸದರಿ ಹಣದ ಮರುಪಾವತಿ ಬಗ್ಗೆ ಮಲ್ಲಿಕಾರ್ಜುನನಿಗೂ ಮತ್ತು ನನ್ನ ತಮ್ಮನಿಗೆ ಜಗಳವಾಗಿತ್ತು. ಆ ಕಾರಣದಿಂದ ಮಲ್ಲಿಕಾರ್ಜುನ, ನವೀನ ಉಗರಗೋಳ ಮತ್ತು ರಾಜೇಶ ಪೂಜಾರ ನನ್ನ ತಮ್ಮನ ಕೊಲೆ ಮಾಡಿದ್ದಾರೆ ಎಂದು ಗೊತ್ತಾಯಿತು. 2 ಮತ್ತು 3 ನೇ ಆರೋಪಿಗಳು 1 ನೇ ಆರೋಪಿಯ ಸ್ನೇಹಿತರಾಗಬೇಕು.

10. ಮಲ್ಲಿಕಾರ್ಜುನ ಮೃತ ನಾಗರಾಜನಿಗೆ ಬರೆದುಕೊಟ್ಟ ಬಾಂಡ್‌ನ್ನು ನಾನು ಪೊಲೀಸರಿಗೆ ಕೊಟ್ಟಿದ್ದೇನೆ. ಅದನ್ನು ಈಗ ತೋರಿಸಿದಲ್ಲಿ ಗುರ್ತಿಸುತ್ತೇನೆ. ಸದರಿ ಬಾಂಡ್‌ನ್ನು ಈಗ ನೋಡುತ್ತಿದ್ದು, ಅದಕ್ಕೆ ನಿಪಿ.17 ಎಂದು ಗುರ್ತಿಸಲಾಯಿತು. ಪೊಲೀಸರು ಈ ಪ್ರಕರಣದ ಬಗ್ಗೆ ನನ್ನನ್ನು ವಿಚಾರಿಸಿ, ನನ್ನ ಹೇಳಿಕೆಯನ್ನು ಪಡೆದುಕೊಂಡಿದ್ದಾರೆ.

11. ದಿಃ 01/08/2019 ರಂದು ಪೊಲೀಸರು ಪುನಃ ನನ್ನನ್ನು ಪೋಲಿಸ್ ಠಾಣೆಗೆ ಕರೆಸಿದ್ದರು. ಕರ್ನಾಟಕ ಯುನಿವರ್ಸಿಟಿ ಮ್ಯೂಸಿಯಂಗೆ ಸಿ.ಸಿ.ಟಿ.ವಿ., ಕ್ಯಾಮರಾ ಅಳವಡಿಸಿದ್ದು, ಅದರ ಫೂಟೇಜ್‌ನ್ನು ಪೆನ್‌ಡ್ರೈವ್‌ನಲ್ಲಿ ಹಾಕಿಕೊಂಡು ತಂದು ನನಗೆ ತೋರಿಸಿದರು. ಅದಲ್ಲದೇ ಧಾರವಾಡದ ಹೊಸ ಬಸ್ ನಿಲ್ದಾಣದ ಹತ್ತಿರ ಇರುವ ಎಂ.ಆರ್.ಪಿ. ಬಾರ್ ನ ಹತ್ತಿರದಲ್ಲಿದ್ದ ಸಿ.ಸಿ.ಟಿ.ವಿ., ಫೂಟೇಜಿನ ವಿಡಿಯೋವನ್ನು ಪೆನ್ ಡ್ರೈವಿನಲ್ಲಿ ಹಾಕಿಕೊಂಡು ಬಂದು ನನಗೆ ತೋರಿಸಿದರು. ಸದರಿ ಪೆನ್ ಡ್ರೈವ್‌ವನ್ನು ಕಂಪ್ಯೂಟರಿಗೆ ಜೋಡಣೆ ಮಾಡಿ ತೋರಿಸಿದ್ದಾರೆ. ಸದರಿ ದೃಶ್ಯಾವಳಿಯಲ್ಲಿ ಕರ್ನಾಟಕ ಯುನಿವರ್ಸಿಟಿಯ ಆವರಣದಲ್ಲಿ ಹೋಗುವಾಗ ನನ್ನ ತಮ್ಮ ನಾಗರಾಜ, 1 ನೇ ಆರೋಪಿ ಮಲ್ಲಿಕಾರ್ಜುನ ಮತ್ತು ನವೀನ ಉಗರಗೋಳ ಹೋಗಿದ್ದು, 1 ಮತ್ತು 2 ನೇ ಆರೋಪಿಗಳು ಹಿರೋ ಡಿಲೆಕ್ಸ ಮೋಟಾರ್ ಸೈಕಲ್‌ನಲ್ಲಿ ಸ್ಥಳಕ್ಕೆ ಹೋಗಿದ್ದು, ನಾಗರಾಜ ತನಗೆ ಸೇರಿದ ಟಿವಿಎಸ್ ಮೋಟಾರ್ ಸೈಕಲ್‌ನಲ್ಲಿ ಹೋಗಿದ್ದ. ಅವರು ದಿಃ26/07/2019 ರಂದು ಮದ್ಯಾಹ್ನ 3.00 ಗಂಟೆ ಸಮಯದಲ್ಲಿ ಕರ್ನಾಟಕ ಯುನಿವರ್ಸಿಟಿ ಆವರಣಕ್ಕೆ ಹೋಗಿದ್ದು ಗೊತ್ತಾಯಿತು. ಅಲ್ಲಿಂದ ವಾಪಸ ಬರುವಾಗ ಮಲ್ಲಿಕಾರ್ಜುನ ಒಬ್ಬನೇ ಹಿರೋ ಎಚ್ ಎಫ್ ಮೋಟಾರ್ ಸೈಕಲ್‌ನಲ್ಲಿ ವೇಗವಾಗಿ ಹೊರಗೆ ಹೋಗುವುದು ಕಂಡುಬರುತ್ತಿತ್ತು. ಆಗ ಸಮಯ ಸುಮಾರು 4.30 ರಿಂದ 5.00 ಗಂಟೆಯಾಗಿರಬಹುದು.

12. 1 ಮತ್ತು 2ನೇ ಆರೋಪಿಗಳು ಮೇಲೆ ಹೇಳಿದಂತೆ ಎಂ.ಆರ್.ಪಿ. ಬಾರಿನಲ್ಲಿ ಸರಾಯಿಯ ಟೆಟ್ರಾ ಪ್ಯಾಕನ್ನು ತೆಗೆದುಕೊಂಡಿದ್ದು ಕಂಡುಬರುತ್ತದೆ. ಪೊಲೀಸರು ಪೆನ್ ಡ್ರೈವಿನಲ್ಲಿದ್ದ ವಿಡಿಯೋವನ್ನು ಡಿವಿಡಿ.,ಯಲ್ಲಿ ನಕಲು ಮಾಡಿದರು. ಪೊಲೀಸರು ಚಾಸಾ.6 ರುದ್ರಯ್ಯ ಮತ್ತು ಚಾಸಾ.7 ಕಿರಣ ಕುಮಾರ ಇವರ ಸಮಕ್ಷಮ ಪೆನ್ ಡ್ರೈವ್ ಮತ್ತು ಡಿವಿಡಿ.,ಯನ್ನು ಅಮಾನತ್ತುಪಡಿಸಿಕೊಂಡರು. ಆ ಬಗ್ಗೆ ಪಂಚನಾಮೆ ಬರೆಯಲಾಯಿತು. ಸದರಿ ಪಂಚನಾಮೆಯನ್ನು ಸಂಜೆ ಸುಮಾರು 7.30 ಗಂಟೆ ಸಮಯಕ್ಕೆ ಬರೆಯಲಾಯಿತು. ಪೆನ್ ಡ್ರೈವ್ ಮತ್ತು ಡಿವಿಡಿ.,ಯನ್ನು ನೋಡಿದಲ್ಲಿ ಗುರ್ತಿಸುತ್ತೇನೆ. (ಸದರಿ ಎರಡನ್ನು ಸೇರಿ ಖಾಕಿ ಬಣ್ಣದ ಹಾಳೆಯ ಪಾಕೇಟಿನಲ್ಲಿ ಹಾಕಿದ್ದು, ಸದರಿ ಕವರಿನ ಮೇಲೆ ಮೊಹರು ಹಾಕಲಾಗಿದೆ. ಗೌರವಾನ್ವಿತ ಉಚ್ಚ ನ್ಯಾಯಾಲಯದ ನಿರ್ದೇಶನದಂತೆ ಅವುಗಳ ಸಿ.ಡಿ.,ಯನ್ನು ಸುರಕ್ಷಿತವಾದ ಕವರಿನಲ್ಲಿ ಹಾಕಿ ಅಮಾನತ್ತುಪಡಿಸಿರುವುದಿಲ್ಲ. ವಿಚಾರಣೆಯ ಸಂದರ್ಭದಲ್ಲಿ ಅದು ಸುಸ್ಥಿತಿಯಲ್ಲಿದ್ದಲ್ಲಿ ಮಾತ್ರ ಅದನ್ನು ಸಾಕ್ಷ್ಯವೆಂದು ಪರಿಗಣಿಸಲಾಗುವುದು. ಸರ್ಕಾರಿ ಅಭಿಯೋಜಕರು ಅದನ್ನು ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್ ಮುಖಾಂತರ ತೋರಿಸಲು ಅನುಮತಿ ಕೋರುತ್ತಾರೆ. ಅನುಮತಿ ನೀಡಲಾಯಿತು).

**(ಈ ಹಂತದಲ್ಲಿ ನ್ಯಾಯಾಲಯದ ಬೆಳಗಿನ ಅವಧಿ ಮುಗಿದ ಕಾರಣ ಮುಂದಿನ ಮುಖ್ಯವಿಚಾರಣೆಯನ್ನು ಮದ್ಯಾಹ್ನ 2.45 ಗಂಟೆಯ ನಂತರ ಮುಂದೂಡಲಾಯಿತು).**

(ಈ ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಉಕ್ತ ಹೇಳಿಕೆಯ ಮೇರೆಗೆ ಗಣಕೀಕೃತ ಮಾಡಿಸಲಾಯಿತು).

ಓ. ಹೇ. ಕೇ. ಸರಿ ಇದೆ.

24/05/2022 (**ಉಮೇಶ ಎಂ ಅಡಿಗ**)

ಪ್ರಧಾನ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು,
ಧಾರವಾಡ.

ಮದ್ಯಾಹ್ನ 3.00 ಗಂಟೆಯ ನಂತರ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದಃ**

13. ಅನುಮತಿಯಿಂದ ಅಭಿಯೋಜನೆ ಹಾಜರಪಡಿಸಿದ ಸಿಡಿ.,ಯನ್ನು ತೆರೆದ ನ್ಯಾಯಾಲಯದಲ್ಲಿ ಲ್ಯಾಪ್ ಟಾಪ್ ಮುಖಾಂತರ ನೋಡಲಾಯಿತು. ಅದರಲ್ಲಿ ಒಂದು ಕಡೆಯಲ್ಲಿ ಮೂರು ಜನ ಎರಡು ದ್ವಿಚಕ್ರವಾಹನದಲ್ಲಿ ಬರುವ ದೃಶ್ಯವನ್ನು ನೋಡಿ ಸಾಕ್ಷಿ ಒಬ್ಬನೇ ಸವಾರನಿರುವ ದ್ವಿಚಕ್ರವಾಹನದಲ್ಲಿರುವ ವ್ಯಕ್ತಿ ತನ್ನ ಅಣ್ಣ ಮೃತ ನಾಗರಾಜ ಮತ್ತು ಇಬ್ಬರು ಸವಾರರು ಇರುವ ದ್ವಿಚಕ್ರವಾಹನದಲ್ಲಿ ಇರುವ ವ್ಯಕ್ತಿಗಳು 1 ಮತ್ತು 2ನೇ ಆರೋಪಿಗಳು ಎಂದು ಗುರ್ತಿಸಿದ್ದಾರೆ. ಅದರಂತೆ ಸದರಿ ಸಿ.ಡಿ.,ಯಲ್ಲಿರುವ ಇನ್ನೊಂದು ದೃಶ್ಯದಲ್ಲಿ ದ್ವಿಚಕ್ರ ವಾಹನದಲ್ಲಿ ಒಬ್ಬನೆ ವ್ಯಕ್ತಿ 1ನೇ ಆರೋಪಿ ಎಂದು ಸಾಕ್ಷಿ ಗುರ್ತಿಸಿದ್ದಾರೆ. ಅದರಂತೆ ಸದರಿ ಸಿ.ಡಿ.,ಯಲ್ಲಿ ಲಿಕ್ಕರ್ ಅಂಗಡಿಯಲ್ಲಿರುವ ಇಬ್ಬರು ವ್ಯಕ್ತಿಗಳನ್ನು ಸಾಕ್ಷಿ ಗುರ್ತಿಸಿದ್ದು, ಅವರಲ್ಲಿ ಒಬ್ಬನು ತನ್ನ

ತಮ್ಮ ನಾಗರಾಜ ಹಾಗೂ ಅವರ ಹಿಂದೆ ಬಿಳಿಯ ಬಣ್ಣದ ಜರ್ಕಿನ್ ಹಾಕಿಕೊಂಡವರು 1 ನೇ ಆರೋಪಿ, ಅವರಿಬ್ಬರು ಸೇರಿ ಟೆಟ್ರಾ ಪ್ಯಾಕೇಟಿನ ಲಿಕ್ಕರ್ ನ್ನು ಖರೀದಿಸುವುದು ಕಂಡುಬರುತ್ತಿದೆ ಎಂದು ನೋಡಿ ಹೇಳಿದ್ದಾರೆ. ಕಾರಣ ಸದರಿ ಸಿ.ಡಿ., ಗೆ ನಿಶಾನೆ.ಪಿ.18 ಎಂದು ಗುರ್ತಿಸಲಾಯಿತು. ತನಿಖಾಧಿಕಾರಿಗಳಿಗೆ ಸೂಚಿಸಿ ಸಂಬಂಧಿಸಿದ ಭಾಗದ ಪೋಟೋಗಳನ್ನು ತೆಗೆದು ಹಾಜರಪಡಿಸುವಂತೆ ಸರ್ಕಾರಿ ಅಭಿಯೋಜಕರಿಗೆ ನಿರ್ದೇಶಿಸಲಾಯಿತು. ಸದರಿ ಸಿ.ಡಿ.,ಯಲ್ಲಿ ದೃಶ್ಯಗಳನ್ನೊಳಗೊಂಡ ಪೆನ್ ಡ್ರೈವ್ ಗೆ ನಿಪಿ.19 ಎಂದು ಗುರ್ತಿಸಲಾಯಿತು. (2 ನೇ ಆರೋಪಿ ಪರ ವಕೀಲರು ನಿಪಿ.18 ಮತ್ತು 19 ನ್ನು ಗುರ್ತಿಸಲು ಅಕ್ಷೇಪಿಸಿದ್ದು, ನಿಪಿ.19 ರಲ್ಲಿ ಸಿ.ಸಿ.ಟಿವಿ., ಪೂಟೇಜ್ ನ್ನು ಯಾರು ದಾಖಲಿಸಿದ್ದಾರೆ ಎನ್ನುವ ಬಗ್ಗೆ ಉಲ್ಲೇಖವಿಲ್ಲ ಮತ್ತು ಸದರಿಯವರ ಪ್ರಮಾಣಪತ್ರವನ್ನು ಪಡೆದಿಲ್ಲ ಕಾರಣ ಭಾರತೀಯ ಸಾಕ್ಷ್ಯ ಅಧಿನಿಯಮ 65 ಬಿ ಅಡಿಯಲ್ಲಿ ಸೂಕ್ತವಾದ ಪ್ರಮಾಣಪತ್ರವಿಲ್ಲದ ಕಾರಣ ಅದನ್ನು ಸಾಕ್ಷವೆಂದು ಪರಿಗಣಿಸಲು ಆಗುವುದಿಲ್ಲ ಎಂದು ಹೇಳುತ್ತಾರೆ. ಅದೇ ರೀತಿ ಯುನಿವರ್ಸಿಟಿಯ ಮೂಸಿಯಂನಲ್ಲಿರುವ ಸಿ.ಸಿ.ಟಿ.ವಿ.,ಯಲ್ಲಿ ಪ್ರತ್ಯೇಕವಾದ ವಿಡಿಯೋ ಆಗಿದ್ದು ಹಾಗೂ ಲಿಕ್ಕರ್ ಶಾಪ್‌ನಲ್ಲಿ ಇದ್ದ ಸಿ.ಸಿ.ಟಿ.ವಿ..,ಯಲ್ಲಿ ಇದೆ ಎನ್ನಲಾದ ದೃಶ್ಯಾವಳಿಗಳು ಪ್ರತ್ಯೇಕವಾಗಿದ್ದು ಅವುಗಳನ್ನು ಸಹ ಯಾರು ದಾಖಲಿಸಿದ್ದಾರೆ ಎನ್ನುವ ಬಗ್ಗೆ ವಿವರಣೆ ಮತ್ತು ಪ್ರಮಾಣಪತ್ರ ಇಲ್ಲ ಎಂದು ಹೇಳುತ್ತಾರೆ. ಸರ್ಕಾರಿ ಅಭಿಯೋಜಕರು ಮಹಜರಿನಲ್ಲಿ ಈ ಬಗ್ಗೆ ವಿವರವಾದ ಉಲ್ಲೇಖವಿದೆ ಹಾಗೂ ಭಾರತೀಯ ಸಾಕ್ಷ ಅಧಿನಿಯಮ 65 ಬಿ ಅಡಿಯಲ್ಲಿ ಪ್ರಮಾಣಪತ್ರವೂ ಇದೆ ಕಾರಣ ಅದನ್ನು ಸಾಕ್ಷ್ಯವೆಂದು ಪರಿಗಣಿಸಬಹುದು ಎಂದು ಹೇಳುತ್ತಾರೆ. ಅವುಗಳನ್ನು ಸಾಕ್ಷ್ಯವೆಂದು ಪರಿಗಣಿಸಬಹುದೋ ಅಥವಾ ಇಲ್ಲವೋ ಎನ್ನುವ ವಿಷಯಗಳನ್ನು ಮುಖ್ಯ ವಾದ ವಿವಾದದ ಸಮಯದಲ್ಲಿ ಪರಿಗಣಿಸಿ ನಿರ್ಣಯಿಸುವ ಶರತ್ತಿಗೊಳಪಟ್ಟು, ಸಾಕ್ಷಿಯಿಂದ ಅವುಗಳನ್ನು ಗುರ್ತಿಸಲಾಗಿದೆ ಎಂದು ಉಲ್ಲೇಖಿಸಲು ಅವುಗಳಿಗೆ ನಿಶಾನೆ ನೀಡಲಾಗಿದೆ). ಈ ಬಗ್ಗೆ ಮಹಜರನ್ನು ತಯಾರಿಸಿದ್ದು, ಅದಕ್ಕೆ ನನ್ನ ಸಹಿ ಪಡೆಯಲಾಗಿದೆ. ಸದರಿ ಮಹಜರಿಗೆ ನಿಪಿ.20 ಎಂದು ಗುರ್ತಿಸಲಾಯಿತು. ಅದರಲ್ಲಿರುವ ಸಾಕ್ಷಿಯ ಸಹಿಗೆ ನಿಶಾನೆ.ಪಿ. 20(ಎ) ಎಂದು ಗುರ್ತಿಸಲಾಯಿತು.

**ಪಾಟೀಸವಾಲು 1 ರಿಂದ 3 ನೇ ಆರೋಪಿಗಳ ಪರವಾಗಿಃ**

14. ಸಮಯ ಕೋರುತ್ತಾರೆ. ಕಾರಣ ಮುಂದುಡಲಾಯಿತು.

(ಈ ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಉಕ್ತ ಹೇಳಿಕೆಯ ಮೇರೆಗೆ ಗಣಕೀಕೃತ ಮಾಡಿಸಲಾಯಿತು).

ಓ. ಹೇ. ಕೇ. ಸರಿ ಇದೆ.

Sd/-

24/05/2022

(**ಉಮೇಶ ಎಂ ಅಡಿಗ**)

ಪ್ರಧಾನ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು,

ಧಾರವಾಡ.

**ದಿಃ 5-2-2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀಸವಾಲು 2 ಮತ್ತು 3 ನೇ ಆರೋಪಿಗಳ ಪರ ವಕೀಲರಿಂದಃ**

15. ಆರೋಪಿತರ ಪರ ವಕೀಲರು ಗೈರು ಹಾಜರಾಗಿದ್ದು ಆರೋಪಿತರು ಪಾಟಿ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.

(ಈ ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಉಕ್ತ ಹೇಳಿಕೆಯ ಮೇರೆಗೆ ಗಣಕೀಕೃತ ಮಾಡಿಸಲಾಯಿತು).

ಓ. ಹೇ. ಕೇ. ಸರಿ ಇದೆ.

(ಶ್ರೀಮತಿ ಕೆ. ಜಿ ಶಾಂತಿ )
ಪ್ರಧಾನ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು,
ಧಾರವಾಡ.

**ದಿಃ 5-2-2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀಸವಾಲು 2 ಮತ್ತು 3 ನೇ ಆರೋಪಿಗಳ ಪರ ವಕೀಲರಿಂದಃ**

16. ಪಿರ್ಯಾದು ಕೊಡುವ ದಿನ ನಾನು ಆರೋಪಿಗಳನ್ನು ನೋಡಿರಲಿಲ್ಲ. ಮಲ್ಲಿಕಾರ್ಜುನ ತನ್ನ ತಂಗಿಯ ಮದುವೆಗಾಗಿ ನಾಗರಾಜನಿಂದ ಸಾಲ ಪಡೆಯುವಾಗ ಬಾಂಡ್ ಬರೆದುಕೊಟ್ಟಿದ್ದು ಸದರಿ ಹಣದ ಮರುಪಾವತಿ ಬಗ್ಗೆ ಮಲ್ಲಿಕಾರ್ಜುನನಿಗೂ ಮತ್ತು ನನ್ನ ತಮ್ಮನಿಗೆ ಜಗಳವಾದ ಕಾರಣದಿಂದ ಮಲ್ಲಿಕಾರ್ಜುನ, ನವೀನ ಉಗರಗೋಳ ಮತ್ತು ರಾಜೇಶ ಪೂಜಾರ ನನ್ನ ತಮ್ಮನ ಕೊಲೆ ಮಾಡಿದ್ದಾರೆ ಎಂದು ಗೊತ್ತಾಯಿತು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

17. ದಿಃ 01/08/2019 ರಂದು ಪೊಲೀಸರು ಪುನಃ ನನ್ನನ್ನು ಪೋಲಿಸ್ ಠಾಣೆಗೆ ಕರೆಸಿದ್ದು ಕರ್ನಾಟಕ ಯುನಿವರ್ಸಿಟಿ ಮ್ಯೂಸಿಯಂಗೆ ಸಿ.ಸಿ.ಟಿ.ವಿ., ಕ್ಯಾಮರಾ ಅಳವಡಿಸಿದ್ದು, ಅದರ ಫೂಟೇಜ್‌ನ್ನು ಪೆನ್‌ಡ್ರೈವ್ ನಲ್ಲಿ ಹಾಕಿಕೊಂಡು ತಂದು ನನಗೆ ತೋರಿಸಿದ್ದು ಅದಲ್ಲದೇ ಧಾರವಾಡದ ಹೊಸ ಬಸ್ ನಿಲ್ದಾಣದ ಹತ್ತಿರ ಇರುವ ಎಂ.ಆರ್.ಪಿ. ಬಾರ್ ನ ಹತ್ತಿರದಲ್ಲಿದ್ದ ಸಿ.ಸಿ.ಟಿ.ವಿ., ಫೂಟೇಜಿನ ವಿಡಿಯೋವನ್ನು ಪೆನ್ ಡ್ರೈವಿನಲ್ಲಿ ಹಾಕಿಕೊಂಡು ಬಂದು ನನಗೆ ತೋರಿಸಿದ್ದು ಸದರಿ ಪೆನ್ ಡ್ರೈವ್‌ನ್ನು ಕಂಪ್ಯೂಟರಿಗೆ ಜೋಡಣೆ ಮಾಡಿ ತೋರಿಸಿದ್ದಾರೆ ಮತ್ತು ಸದರಿ ದೃಶ್ಯಾವಳಿಯಲ್ಲಿ ಕರ್ನಾಟಕ ಯುನಿವರ್ಸಿಟಿಯ ಆವರಣದಲ್ಲಿ ಹೋಗುವಾಗ ನನ್ನ ತಮ್ಮ ನಾಗರಾಜ, 1 ನೇ ಆರೋಪಿ ಮಲ್ಲಿಕಾರ್ಜುನ ಮತ್ತು ನವೀನ ಉಗರಗೋಳ ಹೋಗಿದ್ದು, 1 ಮತ್ತು 2 ನೇ

ಆರೋಪಿಗಳು ಹಿರೋ ಡಿಲೆಕ್ಸ ಮೋಟಾರ್ ಸೈಕಲ್‌ನಲ್ಲಿ ಸ್ಥಳಕ್ಕೆ ಹೋಗಿದ್ದು, ನಾಗರಾಜ ತನಗೆ ಸೇರಿದ ಟಿವಿಎಸ್ ಮೋಟಾರ್ ಸೈಕಲ್‌ನಲ್ಲಿ ಹೋಗಿದ್ದು ಅವರು ದಿಃ26/07/2019 ರಂದು ಮದ್ಯಾಹ್ನ 3.00 ಗಂಟೆ ಸಮಯದಲ್ಲಿ ಕರ್ನಾಟಕ ಯುನಿವರ್ಸಿಟಿ ಆವರಣಕ್ಕೆ ಹೋಗಿದ್ದು ಗೊತ್ತಾಯಿತು ಮತ್ತು ಅಲ್ಲಿಂದ ವಾಪಸ ಬರುವಾಗ ಮಲ್ಲಿಕಾರ್ಜುನ ಒಬ್ಬನೇ ಹಿರೋ ಎಚ್ ಎಫ್ ಮೋಟಾರ್ ಸೈಕಲ್‌ನಲ್ಲಿ ವೇಗವಾಗಿ ಹೊರಗೆ ಹೋಗುವುದು ಕಂಡುಬರುತ್ತಿದ್ದು ಆಗ ಸಮಯ ಸುಮಾರು 4.30 ರಿಂದ 5.00 ಗಂಟೆಯಾಗಿರಬಹುದು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

18. 1 ಮತ್ತು 2 ನೇ ಆರೋಪಿಗಳು ಮೇಲೆ ಹೇಳಿದಂತೆ ಎಂ.ಆರ್.ಪಿ. ಬಾರಿನಲ್ಲಿ ಸರಾಯಿಯ ಟೆಟ್ರಾ ಪ್ಯಾಕನ್ನು ತೆಗೆದುಕೊಂಡಿದ್ದು ಕಂಡುಬರುತ್ತಿದ್ದು ಪೊಲೀಸರು ಪೆನ್ ಡ್ರೈವಿನಲ್ಲಿದ್ದ ವಿಡಿಯೋವನ್ನು ಡಿವಿಡಿ.,ಯಲ್ಲಿ ನಕಲು ಮಾಡಿದರು ಹಾಗೂ ಪೊಲೀಸರು ಚಾಸಾ.6 ರುದ್ರಯ್ಯ ಮತ್ತು ಚಾಸಾ.7 ಕಿರಣ ಕುಮಾರ ಇವರ ಸಮಕ್ಷಮ ಪೆನ್ ಡ್ರೈವ್ ಮತ್ತು ಡಿವಿಡಿ.,ಯನ್ನು ಅಮಾನತ್ತುಪಡಿಸಿಕೊಂಡು ಪಂಚನಾಮೆಯನ್ನು ಸಂಜೆ ಸುಮಾರು 7.30 ಗಂಟೆ ಸಮಯಕ್ಕೆ ಬರೆಯಲಾಯಿತು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

19. ನಾನು ಯಾವುದೇ ಪೂಟೇಜ ನೋಡಿಲ್ಲ ಮತ್ತು ಪೂಟೇಜನಲ್ಲಿ ಆರೋಪಿಗಳನ್ನು ನೋಡಿಲ್ಲ ಅಂದರೆ ಸರಿಯಲ್ಲ. ನ್ಯಾಯಾಲಯದ

ಮುಂದಿರುವ ಆರೋಪಿಗಳು ಪೂಟೇಜನಲ್ಲಿ ಕಂಡುಬಂದಿಲ್ಲ ಅಂದರೆ ಸರಿಯಲ್ಲ. ಸಿಸಿ ಟಿವಿ ಪೂಟೇಜನ್ನು ನನಗೆ ಸಬಅರ್ಬನ ಪೊಲೀಸಠಾಣೆಯಲ್ಲಿ ತೋರಿಸಿದ್ದಾರೆ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ಈ ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಉಕ್ತ ಹೇಳಿಕೆಯ ಮೇರೆಗೆ ಗಣಕೀಕೃತ ಮಾಡಿಸಲಾಯಿತು).

ಓ. ಹೇ. ಕೇ. ಸರಿ ಇದೆ.

(ಶ್ರೀಮತಿ ಕೆ. ಜಿ ಶಾಂತಿ )
ಪ್ರಧಾನ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು,
ಧಾರವಾಡ.